# INTERNATIONAL INDIAN SCHOOL – DAMMAM

## SECOND TERMINAL EXAM (2017-2018)

**CLASS : VII** | **TOTAL MARKS: 80**
**SUB : KANNADA** | **DURATION : 3 HRS.**

---

**GENERAL INSTRUCTIONS :**

1) **Read all Questions carefully before answering.**
2) **All Questions must be numbered correctly as in the question paper.**

---

**I** ವಿಭಾಗ – ಎ

**ಅ) ಆವರಣದಿಂದ ಸರಿಯಾದ ಪದವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ :** (1 X 10 =10)

೧) ಕೋಳಿ _________ ಕರೆಯುವಾಗ (ಕೂಗಿ, ತೂಗಿ, ರೇಗಿ)
೨) ಒಂದೇ ಹಪ್ಪಳ, ಊರಿಗೆಲ್ಲಾ _________ ( ಊಟ, ಕೂಟ, ಕಾಟ)
೩) _________ ನೀರು ಹನಿಸುವಾಗ ( ಅಣ್ಣ, ಬಣ್ಣ, ಸುಣ್ಣ )
೪) ಅವನು _________ದಲ್ಲಿ ಒಂದು ಸಾಮ್ರಾಜ್ಯವನ್ನು ಸ್ಥಾಪಿಸಿದನು. (ಚೈನಾ, ರಷ್ಯ, ಅಮೇರಿಕಾ)
೫) ಅದು _________ ಶಿಕ್ಷಣದ ಅವಧಿಯಾಗಿತ್ತು. (ನೀತಿ, ರೀತಿ, ಪ್ರೀತಿ )
೬) ಒಂದು _______ವಾದ ತಡೆಗೋಡೆ ನಿರ್ಮಿಸಬೇಕು. ( ಭದ್ರ, ಅಭದ್ರ, ಸುಭದ್ರ)
೭) ಉತ್ತರಭಾಗದಲ್ಲಿ ಒಂದು ವಿಶಾಲವಾದ _________ ಪ್ರದೇಶವಿತ್ತು. (ಗಡ್ಡಗಾಡು, ಗುಡ್ಡಗಾಡು, ಗಿಡ್ಡಗಾಡು)
೮) ಕನ್ನಡದಲ್ಲಿ _______ ಸಾಹಿತ್ಯದ ಒಂದು ಮಹಾಭಂಡರವೇ ಇದೆ. ( ಜನರಪದ, ಜನಾಪದ, ಜಾನಪದ )
೯) ಪ್ರತಿ ೮೩ ಮೀಟರ್ ದೂರದಲ್ಲಿ ಒಂದೊಂದು ಬುರಜನ್ನು ________. (ಕಟ್ಟಿದ್ದಾರೆ, ಕೊಟ್ಟಿದ್ದಾರೆ, ಬಿಟ್ಟಿದ್ದಾರೆ)
೧೦) ನಾವು ಮೂವರು ನೆರೆಯ ರಾಜ್ಯದ ________ ( ರಾಜರು, ಮಲ್ಲರು, ಸೈನಿಕರು)

**ಆ) ಈ ಕೆಳಗಿನ ಯಾವುದಾದರೂ ಹತ್ತು ಪದಗಳ ಅರ್ಥ ಬರೆಯಿರಿ :** (½ X 10 = 5)

೧) ರವಿ  ೨) ಕೊಠಡಿ  ೩) ಪ್ರಕಾರ  ೪) ಬಾನು  ೫) ಪರಾರಿ
೬) ಅಧೀನ  ೭) ಅಭಿಪ್ರಾಯ  ೮) ಜಟ್ಟಿ  ೯) ಧೃಡಸಂಕಲ್ಪ  ೧೦) ಪುರಸ್ಕಾರ
೧೧) ದಂಡಿಸು  ೧೨) ನಿಪುಣರು

**ಇ) ಈ ಕೆಳಗಿನ ಆರು ಪದಗಳ ಸಮಾನಾರ್ಥಕ ಪದಗಳನ್ನು ಬರೆಯಿರಿ :** (1 X 6 =6)

೧) ಕದನ  ೨) ಮಲ್ಲರು  ೩) ಭುವಿ  ೪) ಗಂಡಾತರ
೫) ಚಂದ್ರ  ೬) ಆದೇಶ  ೭) ಶಿಕ್ಷಕರು  ೮) ಪಂದ್ಯ

**ಈ) ಈ ಕೆಳಗಿನ ಎಂಟು ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ.** (½ X 8 = 4)

೧) ಸೋಲು  ೨) ಸಂಭವ  ೩) ನಿಜ  ೪) ಪ್ರಚಾರ  ೫) ವಿಶ್ವಾಸ
೬) ಗುರು  ೭) ನೀತಿ  ೮) ಈಗ  ೯) ಪ್ರಶ್ನೆ  ೧೦) ಸರಳ

**ಉ) ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.** (1 X 5 =5)

೧) ಭಾನು, ಬಾನು, ರವಿ, ಸೂರ್ಯ

೨) ಅಪಾಯ, ಉಪಾಯ, ಯುಕ್ತಿ, ತಂತ್ರ
೩) ಕತ್ತೆ, ನಾಯಿ, ನರಿ, ಕೋಳಿ
೪) ಗಾಯನ, ಸಂಗೀತ, ಹಾಡು, ಲಾಡು
೫) ಹೀರೆಕಾಯಿ, ಸೌತೆಕಾಯಿ, ಬಟಾಣಿ, ಪ್ರಾಣಿ

## II ವಿಭಾಗ – ಬಿ

ಅ) ಹೊಂದಿಸಿ ಬರೆಯಿರಿ : (½ X 8 = 4)

| | |
|---|---|
| ೧) ಮೊಗ್ಗು ಹಿಗ್ಗು | ಹಿಂಡುವಾಗ |
| ೨) ಪದಕ | ಅರಳಿದಾಗ |
| ೩) ಅಮ್ಮ ಹಾಲು | ಪ್ರಶಸ್ತಿ |
| ೪) ಆಸ್ಥಾನ | ಬೆಳಕು |
| ೫) ದೀಪದ | ಸ್ವರ |
| ೬) ಕರ್ಕಶ | ಪಂಡಿತ |
| ೭) ಒಗಟಿನ | ಗೆಳೆಯ ಪ್ರಾಣಿಗಳು |
| ೮) ಕತ್ತೆ ಮತ್ತು ನರಿ | ವಿಚಾರ |

ಆ) ಈ ಕೆಳಗಿನ ಐದು ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ: (1 X 5 =5)

೧) ಒಗಟು  ೨) ಈರುಳ್ಳಿ  ೩) ಉಡುಪು  ೪) ಉಪಾಯ
೫) ಚಕ್ರವರ್ತಿ  ೬) ಬಂಗಾರ  ೭) ಅವಶ್ಯಕತೆ

ಇ) ಈ ವಾಕ್ಯಗಳಿಗೆ ಪ್ರಶ್ನೆಯ ರೂಪ ಬರೆಯಿರಿ : (1 X 4 =4)

೧) ಒಂದು ಕಾಡಿನಲ್ಲಿ ಒಂದು ಕತ್ತೆ, ಒಂದು ನರಿ ಇದ್ದವು.
೨) ಅವು ಬಟಾಣಿ ಮತ್ತು ಸೌತೆಕಾಯಿಗಳನ್ನು ಮೆಲ್ಲ ತೊಡಗಿದವು.
೩) ಕತ್ತೆಯು ಕರ್ಕಶ ಧ್ವನಿಯಲ್ಲಿ ಹಾಡತೊಡಗಿತು.
೪) ಕತ್ತೆ ಮತ್ತು ನರಿ ಹಳ್ಳಿಯ ಮಾರ್ಗದಲ್ಲಿ ಹೋಗುತ್ತಿದ್ದವು.

ಈ) ಈ ಪದ್ಯಭಾಗವನ್ನು ಪೂರ್ತಿಗೊಳಿಸಿರಿ : (3 Marks)

ಕೋಳಿ ________________
____________________
____________________
ಮೂಡಿ ಬಂದನು.

ಉ ) ಬಿಟ್ಟ ಸ್ಥಳ ತುಂಬಿರಿ : (1 X 6 =6)

೧) ಅಲ್ಲಿ ಹೂಣ ಎಂಬ ಜಾತಿಯ ಜನ ________.

೨) ________ ನರಿಯು ಉಪಾಯವಾಗಿ ಅಲ್ಲಿಂದ ಜಾರಿಗೊಂಡಿತು.

೩) ರವಿಯು ಮೂಡಿ ಬಂದನು ಪದ್ಯ ಬರೆದ ಕವಿ ________.

೪) ಆ ಗೆಳೆಯ ಪ್ರಾಣಿಗಳು ಕಳ್ಳ ಹೆಜ್ಜೆಗಳನ್ನಿಡುತ್ತಾ ________ ದೊಳಗೆ ಹೋದವು.

೫) ರಾಮಕೃಷ್ಣನು ಅದೇ ದಿನ ರಾತ್ರಿ ________ ಬಿಡಾರಕ್ಕೆ ಹೋದನು.

೬) ಕತ್ತೆಯು ಮುಖವನ್ನು ________ ಕಡೆಗೆ ಎತ್ತರಿಸಿತು.

ಊ) ಈ ಪದ್ಯಭಾಗವನ್ನು ಸರಿಪಡಿಸಿ ಬರೆಯಿರಿ : **(3 Marks)**

ಕದನವಾಡಿ ಕತ್ತಲೊಡನೆ
ಆಟವಾಡಿ ಮೋಡದೊಡನೆ
ಬೆಳಕು ನೀಡಿ ಬಾನು ಭುವಿಗೆ.

**III**

## ವಿಭಾಗ – ಸಿ

ಅ) ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ: **(1 X 10 =10)**

೧) ರವಿಯು ಹೇಗೆ ಮಾಡುತ್ತಾನೆ?

೨) ವಿಜಯನಗರದ ಮಲ್ಲರು ಯಾರ ಸಹಾಯ ಬೇಡಿದರು?

೩) ರವಿಯು ಯಾರೊಡನೆ ಆಟವಾಡುತ್ತಾನೆ?

೪) ಕೃಷ್ಣದೇವರಾಯನ ಆಸ್ಥಾನಕ್ಕೆ ಯಾರು ಬಂದರು?

೫) ಒಗಟು ಎನ್ನುವ ಪದ ಯಾವ ಯಾವ ಪದಗಳಿಂದ ಆಗಿದೆ?

೬) ನರಿಯು ಎಲ್ಲಿ ಅಡಗಿ ಕುಳಿತುಕೊಂಡಿತು?

೭) ಮಕ್ಕಳು ಎದ್ದು ನಿಂತು ಯಾರಿಗೆ ಗೌರವ ಸೂಚಿಸಿದರು?

೮) ಕತ್ತೆ ಮತ್ತು ನರಿ ತೋಟದಲ್ಲಿ ಏನನ್ನು ಮೆಲ್ಲತೊಡಗಿಸವು?

೯) ಚಿನ್–ಶಿಹ್ – ಹ್ವಾಂಗ್‌ತಿ ಎಂಬುವವನು ಯಾರು?

೧೦) ಹೊಟ್ಟೆ ತುಂಬಿದ ಮೇಲೆ ಕತ್ತೆಗೆ ಯಾವ ಆಸೆಯಾಯಿತು?

೧೧) ಗುಡ್ಡಗಾಡು ಪ್ರದೇಶದಲ್ಲಿ ಯಾರು ವಾಸವಾಗಿದ್ದರು?

೧೨) ಅಪ್ಪ ಎಲ್ಲಿಗೆ ಹೋಗುತ್ತಾರೆ?

ಆ) ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ೨–೩ ವಾಕ್ಯದಲ್ಲಿ ಉತ್ತರಿಸಿ : **(2½ X 4 = 10)**

೧) ನೀತಿ ಶಿಕ್ಷಣದ ಅವಧಿಯಲ್ಲಿ ಶಿಕ್ಷಕರು ಏನು ನಡೆಸುತ್ತಾರೆ?

೨) ನೆರೆ ರಾಜ್ಯದ ಮಲ್ಲರು ಏನೇನು ಧರಿಸಿದ್ದರು?

೩) ಕಲ್ಲಂಗಡಿ ಹಣ್ಣನ್ನು ಸೂಚಿಸುವ ಒಗಟು ಯಾವುದು ?

೪) ಮಹಾಗೋಡೆ ನಿರ್ಮಾಣಗೊಂಡ ಮೇಲೆ ಏನಾಯಿತು?

೫) ಕಡೆಗೆ ತೋಟದ ಯಜಮಾನನು ಏನು ಮಾಡಿದನು?

೬) ಜಾನಪದ ಸಾಹಿತ್ಯ ಎಂದರೆ ಯಾವುದು?

ಇ) ಈ ಕೆಳಗಿನ ಗದ್ಯಭಾಗವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ : **(1 X 5 =5)**

ಜ್ಞಾನಪೀಠ ಪುರಸ್ಕೃತ ಡಾ.ಶಿವರಾಮ ಕಾರಂತರು ಹುಟ್ಟಿದ್ದು ಉಡುಪಿ ಜಿಲ್ಲೆಯ ಕೋಟದಲ್ಲಿ ೧೯೦೨, ಆಕ್ಟೋಬರ್ ೧೦ ರಂದು. ಒಂದು ಶತಮಾನಕ್ಕೆ ನಾಲ್ಕು ವರ್ಷಗಳಷ್ಟೇ ಕಮ್ಮಿಯಾಗಿ ಬಾಳಿ, ತಮ್ಮ ಜೀವಿತಾವಧಿಯಲ್ಲಿ ಸುಮಾರು ೪೨೭ ಪುಸ್ತಕಗಳನ್ನು ರಚಿಸಿದರು. ಅವುಗಳಲ್ಲಿ ಕಾದಂಬರಿಗಳು ೪೭. ತಮ್ಮ ೯೬ನೆಯ ವಯಸ್ಸಿನಲ್ಲೂ ಹಕ್ಕಿಗಳ ಕುರಿತು ಒಂದು ಪುಸ್ತಕವನ್ನು ಬರೆದಿದ್ದು, ಇದು ವಿಶ್ವದಾಖಲೆಗೆ ಅರ್ಹವಾಗಿರುವ ಒಂದು ಸಾಧನೆ ಎನ್ನಬಹುದು. ಸಾಹಿತಿಯಾಗಿ ಶಿವರಾಮ ಕಾರಂತರು ಪ್ರಸಿದ್ಧಿಯಾಗಿರುವಂತೆ, ಇತರ ಕ್ಷೇತ್ರಗಳಲ್ಲೂ ಅಪಾರ ಸಾಧನೆ ಮಾಡಿದವರು. ಕರ್ನಾಟಕದ ಪ್ರಮುಖ ಕಲೆಯಾದ ಯಕ್ಷಗಾನದ ಉಳಿವಿಗೆ ಪ್ರಯತ್ನಿಸಿ, ಅದರಲ್ಲಿ ಹಲವು ಪ್ರಯೋಗಗಳನ್ನು ಮಾಡಿದ್ದರು. ತಾವೇ ಸ್ವತಃ ನೃತ್ಯವನ್ನು ಕಲಿತು, ಬ್ಯಾಲೆಯಲ್ಲೂ ಗಂಭೀರ ಪ್ರಯೋಗ ಮಾಡಿದ್ದರು.

ನಿರಂತರ ಪ್ರಯೋಗಶೀಲರಾಗಿದ್ದು ಕೋಟ ಶಿವರಾಮಕಾರಂತ ಅವರು ಕನ್ನಡ ಚಿತ್ರರಂಗದಲ್ಲಿ ಕೂಡ ತಮ್ಮ ಪ್ರಯೋಗವನ್ನು ಆರಂಭ ಮಾಡಿದ್ದು, ಮೂಕಿ ಚಿತ್ರ ನಿರ್ಮಾಣಕ್ಕೆ ಕೈ ಹಾಕುವ ಮೂಲಕ ಹರಿಜನರ ಬದುಕನ್ನು ಆಧರಿಸಿದ್ದ ಡೊಮಿಂಗೋ (೧೯೩೦) ಚಿತ್ರವನ್ನು ತಾವೇ ಚಿತ್ರೀಕರಿಸಿ, ಅಭಿನಯಿಸಿ ನಿರ್ದೇಶಿಸಿದ್ದರು. ಅನಂತರ ಭೂತರಾಜ್ಯ (೧೯೩೧) ಎಂಬ ಮೂಕಿ ಚಿತ್ರಗಳನ್ನು ಸಹ ನಿರ್ಮಿಸಿದರು.

೧) ಡಾ.ಶಿವರಾಮ ಕಾರಂತರು ಎಲ್ಲಿ ಮತ್ತು ಯಾವಾಗ ಜನಿಸಿದರು ?

೨) ಕಾರಂತರು ತಮ್ಮ ೯೬ನೆಯ ವಯಸ್ಸಿನಲ್ಲಿ _________ ಕುರಿತು ಪುಸ್ತಕವನ್ನು ಬರೆದಿದ್ದರು.

೩) ಕರ್ನಾಟಕದ ಪ್ರಮುಖ ಕಲೆ _________

೪) ಕಾರಂತರು ತಮ್ಮ ಜೀವಿತಾವಧಿಯಲ್ಲಿ ಎಷ್ಟು ಕಾದಂಬರಿಗಳನ್ನು ರಚಿಸಿದ್ದಾರೆ?

೫) ಕಾರಂತರು, ಹರಿಜನರ ಬದುಕನ್ನು ಆಧರಿಸಿ ಚಿತ್ರೀಕರಿಸಿದ ಚಿತ್ರ ಯಾವುದು?

********